**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 820/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಚೆನ್ನಮ್ಮ |
| ತಂದೆಯ ಹೆಸರು | : | ಕರಿಯಯ್ಯ ಬಿ. |
| ವಯಸ್ಸು | : | 59 ವರ್ಷ |
| ಉದ್ಯೋಗ | : | ಮೇಲ್ವಿಚಾರಕಿ, ಹೆಚ್.ಡಿ. ಕೋಟೆ ಸಿ.ಡಿ.ಪಿ.ಒ. ಕಛೇರಿ |
| ವಾಸಸ್ಥಳ | : | ಹೆಚ್.ಡಿ. ಕೋಟೆ ಟೌನ್. |

**ಸಾಕ್ಷಿಯನ್ನು ದಿನಾಂಕಃ 17.06.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು ಕಳೆದ 13 ವರ್ಷಗಳಿಂದ ಅಂದರೆ 2012 ನೇ ಇಸವಿಯಿಂದ ಹೆಚ್.ಡಿ. ಕೋಟೆಯ ಸಿ.ಡಿ.ಪಿ.ಒ. ಕಛೇರಿಯಲ್ಲಿ ಮೇಲ್ವಿಚಾರಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 01.06.2020 ರಂದು ಬೆಳಿಗ್ಗೆ ಸುಮಾರು 10.30 ಗಂಟೆ ಸಮಯದಲ್ಲಿ ನಾನು ಹಾಗು ಚಾಸಾ-1ರವರು ಕಛೇರಿಯಲ್ಲಿರುವಾಗ ಚಾಸಾ-6 ರವರು ನಮಗೆ ಕರೆ ಮಾಡಿ ಅಣ್ಣೂರು ಹೊಸಹಳ್ಳಿ ಗ್ರಾಮದ 1 ನೇ ಆರೋಪಿಯಾದ ನೇತ್ರಾವತಿಯವರು ಅವರ ಅಪ್ರಾಪ್ತ ಮಗಳಾದ ಚಾಸಾ-2 - ಮಮತಾಳನ್ನು ಬಾಲ್ಯ ವಿವಾಹ ಮಾಡಿರುತ್ತಾರೆಂದು ವಿಚಾರ ತಿಳಿಸಿರುತ್ತಾರೆ ಹಾಗು ಸದರಿ ವಿಚಾರವನ್ನು ಅದೇ

ದಿನ ಅಂದರೆ ದಿನಾಂಕಃ 01.06.2020 ರಂದು ಅಪ್ರಾಪ್ತ ಬಾಲಕಿಯಾದ ಚಾಸಾ–2 ರವರೇ ತನಗೆ ತಿಳಿಸಿರುವುದಾಗಿ ಚಾಸಾ–6 ರವರು ನಮಗೆ ತಿಳಿಸಿರುತ್ತಾರೆ. ನಂತರ ನಾನು, ಚಾಸಾ–1, ಚಾಸಾ–6 ಹಾಗು ಚಾಸಾ–8 ರವರು ಹೊಸಹಳ್ಳಿ ಗ್ರಾಮದ 1 ನೇ ಆರೋಪಿಯ ಮನೆಗೆ ಹೋಗಿದ್ದು, ಅಲ್ಲಿ ಅಪ್ರಾಪ್ತ ಬಾಲಕಿಯಾದ ಚಾಸಾ–2 ರವರು ಇದ್ದು, ಅವರನ್ನು ವಿಚಾರಿಸಿದಾಗ ಆಕೆ ದಿನಾಂಕಃ 16.04.2020 ರಂದು ಬೆಳಿಗ್ಗೆ 05.00 ಗಂಟೆಗೆ ತನ್ನ ತಾಯಿಯಾದ 1 ನೇ ಆರೋಪಿ, 3 ಮತ್ತು 4 ನೇ ಆರೋಪಿಗಳು ಸೇರಿ ತನ್ನನ್ನು 2 ನೇ ಆರೋಪಿಗೆ ಕೊಟ್ಟು ವಿವಾಹ ಮಾಡಿಸಿರುವುದಾಗಿ ತಿಳಿಸಿರುತ್ತಾರೆ. ನಂತರ ಚಾಸಾ–1 ರವರು ಚಾಸಾ–2 ರವರ ಹೇಳಿಕೆಯನ್ನು ದಾಖಲಿಸಿಕೊಂಡು ನಂತರ ನಾವು ಕಛೇರಿಗೆ ಬಂದು ನಂತರ ಚಾಸಾ–1 ರವರು ಠಾಣೆಗೆ ಹೋಗಿ ಈ ಬಗ್ಗೆ ದೂರನ್ನು ನೀಡಿರುತ್ತಾರೆ. ನಂತರ ನಾನು ಹಾಗು ಚಾಸಾ–1 ರವರು ಅಪ್ರಾಪ್ತ ಬಾಲಕಿಯಾದ ಚಾಸಾ–2 ರವರನ್ನು ಮೈಸೂರಿನ ಸರ್ಕಾರಿ ಬಾಲಮಂದಿರಕ್ಕೆ ಕರೆದುಕೊಂಡು ಹೋಗಿ ಬಿಟ್ಟಿರುತ್ತೇವೆ. ಈ ಬಗ್ಗೆ ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ದಾಖಲಿಸಿಕೊಂಡಿರುತ್ತಾರೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. 1 ನೇ ಆರೋಪಿ ಗೈರು ಹಾಜರಾಗಿದ್ದು, ಅವರ ಪರ ವಕೀಲರು ಹಾಜರಾತಿ ವಿನಾಯಿತಿ ಅರ್ಜಿಯನ್ನು ಸಲ್ಲಿಸಿ 1 ನೇ ಆರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಪರಿಗಣಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ. ಬಿ.ಎಸ್.ಯು. ವಕೀಲರಿಂದಃ**

ನನಗಾಗಲೀ ಅಥವಾ ಚಾಸಾ-1 ರವರಿಗಾಗಲೀ ಸದರಿ ದಿನದಂದು ಅಂದರೆ ದಿನಾಂಕಃ 01.06.2020 ರಂದು ಚಾಸಾ-6 ರವರಿಗೆ ಯಾವುದೇ ಮಾಹಿತಿ ಬಂದಿರುವುದಿಲ್ಲ ಹಾಗು ನಾವು ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರಿಗೆ 2 ನೇ ಆರೋಪಿಯ ಜೊತೆ ಯಾವುದೇ ಬಾಲ್ಯ ವಿವಾಹ ಆಗಿದ್ದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ತನಿಖಾಧಿಕಾರಿಯ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರು ನನ್ನ ಹಾಗು ಚಾಸಾ-1 ರವರ ಸಮಕ್ಷಮ ಯಾವುದೇ ವಿಚಾರ ಅಥವಾ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-2 ರವರಿಗೆ ಕಳೆದ 03 ವರ್ಷಗಳ ಹಿಂದೆ ಪ್ರಾಪ್ತ ವಯಸ್ಕಳಾದ ನಂತರ ಆಕೆ ಮಹೇಶ ಎನ್ನುವ ಹುಡುಗನ ಜೊತೆ ಮದುವೆಯಾಗಿದ್ದಾಳೆಯೇ ಹೊರತು ಆಕೆ ಅಪ್ರಾಪ್ತಳಾಗಿದ್ದಾಗ 2 ನೇ ಆರೋಪಿಯ ಜೊತೆ ಯಾವುದೇ ಮದುವೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದಾಗಿಯೂ ಸಹ ಪೋಲೀಸರಿಗೆ ಸಹಾಯ ಮಾಡುವ ಉದ್ದೇಶದಿಂದ ಹಾಗು ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನಾಗಲೀ ಅಥವಾ ಚಾಸಾ-1 ರವರಾಗಲೀ ಚಾಸಾ-2 ರವರಿಂದ ಯಾವುದೇ ಶಾಲಾ ದಾಖಲೆಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಶಾಲಾ ದಾಖಲೆಯನ್ನು ನಾನು ನೋಡಿರುವುದಿಲ್ಲ.

**ಪಾಟೀ ಸವಾಲುಃ 2 ರಿಂದ 4 ಆರೋಪಿಗಳ ಪರ ಶ್ರೀ.ಎಂ.ಎಸ್.ಕೆ./ಶ್ರೀ.ವಿ.ಕೆ. ವಕೀಲರಿಂದಃ**

ಚಾಸಾ–6 ರವರು ನಮಗೆ ಫೋನ್ ಮೂಲಕ ಮಾಹಿತಿ ತಿಳಿಸಿದ ನಂತರ ಸುಮಾರು 05 ನಿಮಿಷದಲ್ಲಿ ಕಛೇರಿಗೆ ಬಂದಿರುತ್ತಾರೆ. ನಾವು 1 ನೇ ಆರೋಪಿಯ ಮನೆಗೆ ನಮ್ಮ ಕಛೇರಿ ವಾಹನದಲ್ಲಿ ಹೋಗಿರುತ್ತೇವೆ. ನಮ್ಮ ಕಛೇರಿ ಹಾಗು ಚಾಸಾ–6 ರವರ ಕಛೇರಿಗೆ ಸುಮಾರು 100 ಮೀಟರ್ ಅಂತರವಿರುತ್ತದೆ. ನಾವು 1 ನೇ ಆರೋಪಿಯ ಮನೆಗೆ ಹೋದಾಗ ಬೆಳಿಗ್ಗೆ ಸುಮಾರು 11.30 ಗಂಟೆ ಆಗಿರುತ್ತದೆ. ನಾವು ಸದರಿ ಸ್ಥಳಕ್ಕೆ ಹೋಗಿ ಚಾಸಾ–2 ರವರನ್ನು ವಿಚಾರಿಸಿ ಚಾಸಾ–1 ರವರು ಚಾಸಾ–2 ರವರಿಂದ ಶಾಲಾ ದಾಖಲೆಗಳನ್ನು ಪಡೆದುಕೊಂಡಿರುತ್ತಾರೆ. ಆ ಸಮಯದಲ್ಲಿ ಸದರಿ ದಾಖಲೆಯನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ. ಸಾಮಾನ್ಯವಾಗಿ ಮದುವೆ ಸಮಯದಲ್ಲಿ ವರ ಹಾಗು ವಧುವಿನ ಮನೆಯಲ್ಲಿ ಚಪ್ಪರ ಹಾಕಿಸುತ್ತಾರೆಂದರೆ ಸರಿ. ನಾವು ಸ್ಥಳಕ್ಕೆ ಹೋದ ಸಮಯದಲ್ಲಿ 1 ನೇ ಆರೋಪಿಯ ಮನೆಯಲ್ಲಿ ಆ ರೀತಿ ಚಪ್ಪರ ಹಾಕಿರುವುದು ಕಂಡುಬಂದಿರವುದಿಲ್ಲ. ನಾವು 1 ನೇ ಆರೋಪಿಯ ಮನೆಗೆ ಹೋದಾಗ ಅಲ್ಲಿ 1 ನೇ ಆರೋಪಿ ಹಾಗು ಚಾಸಾ–2 ರವರು ಮಾತ್ರ ಇದಿದ್ದರು. ನಾವು ಅಕ್ಕ–ಪಕ್ಕದವರನ್ನು ವಿಚಾರಿಸಿರುವುದಿಲ್ಲ. ನಾವು ಅಲ್ಲಿ ಸುಮಾರು ½ ಗಂಟೆ ವಿಚಾರಿಸಿರುತ್ತೇವೆ. ನಾನು ಚಾಸಾ–1 ರವರ ಜೊತೆ ಸ್ಥಳಕ್ಕೆ ಹೋದ ಸಂಬಂಧ ಚಾಸಾ–1 ರವರು ನನ್ನಿಂದ ಯಾವುದೇ ಹೇಳಿಕೆ ಬರೆಸಿಕೊಂಡಿರುವುದಿಲ್ಲ. ನಾವು ಸ್ಥಳಕ್ಕೆ ಹೋದ ಸಮಯದಲ್ಲಿ ಯಾವುದೇ ಫೋಟೋ ತೆಗೆಸಿರುವುದಿಲ್ಲ. ನಾನು ತಿಳಿಸಿರುವಂತೆ

ಚಾಸಾ-2 ರವರಿಗೆ ಯಾವುದೇ ಬಾಲ್ಯ ವಿವಾಹ ಆಗಿರುವುದಿಲ್ಲ, ಬದಲಾಗಿ ಇಲಾಖಾ ಅಂಕಿ-ಅಂಶಗಳಿಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಗಳಿಗು ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಚಾಸಾ-1 ರವರ ಜೊತೆ 1 ನೇ ಆರೋಪಿಯ ಮನೆಗೆ ಹೋಗಿರುವುದಿಲ್ಲ ಹಾಗು ಅಲ್ಲಿ ಯಾವುದೇ ವಿಚಾರಣೆ ಮಾಡಿರುವುದಿಲ್ಲ, ಬದಲಾಗಿ ಚಾಸಾ-1 ರವರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಚಾಸಾ-1 ರವರ ಜೊತೆ 1 ನೇ ಆರೋಪಿಯ ಮನೆಗೆ ಹೋಗಿ ಚಾಸಾ-2 ರವರನ್ನು ವಿಚಾರಣೆ ಮಾಡದೇ ಇದ್ದುದರಿಂದ ಚಾಸಾ-1 ರವರು ನನ್ನಿಂದ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

(**ಈ ಹಂತದಲ್ಲಿ 2 ರಿಂದ 4 ನೇ ಆರೋಪಿತರ ಪರ ವಕೀಲರು ಮುಂದಿನ ಪಾಟೀ ಸವಾಲು ಸಂಬಂಧ 1 ನೇ ಆರೋಪಿ ಪರ ವಕೀಲರು ನಡೆಸಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವಂತೆ ಕೋರಿಕೊಂಡಿರುತ್ತಾರೆ. ಅವರ ಕೋರಿಕೆಯನ್ನು ಮನ್ನಿಸಿ 1 ನೇ ಆರೋಪಿ ಪರ ವಕೀಲರು ನಡೆಸಿದ ಪಾಟೀ ಸವಾಲನ್ನು 2 ರಿಂದ 4 ನೇ ಆರೋಪಿತರ ಪರ ಅಳವಡಿಸಿಕೊಳ್ಳಲಾಯಿತು.**)

<u>**ಮರುವಿಚಾರಣೆ:**</u> ಇರುವುದಿಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**